# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೧<br>Part – I | ಬೆಂಗಳೂರು, ಶುಕ್ರವಾರ, ೦೮, ಮೇ, ೨೦೨೬ (ವೈಶಾಖ, ೧೮, ಶಕವರ್ಷ, ೧೯೪೮)<br>BENGALURU, FRIDAY, 08, MAY, 2026 ( VAISHAKHA , 18, SHAKAVARSHA, 1948) | ನಂ. ೩೫೫<br>No. 355 |


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 18(3) ರಡಿ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 119 ಬಿಎಂಆರ್ 2023(ಇ), ದಿನಾಂಕ 18.11.2023.
2. ಸರ್ಕಾರದ ಆದೇಶ ಸಂಖ್ಯೆ: ನಅಇ 115 ಬಿಎಂಆರ್ 2024(ಇ), ಬೆಂಗಳೂರು, ದಿನಾಂಕ: 10.02.2025
3. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಬಿಎಂಆರ್‌ಡಿಎ/Township-18(3)/2025-26,ದಿನಾಂಕ:30.01.2026,27.02.2026 ಮತ್ತು 11.03.2026.
4. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಬಿಎಂಆರ್‌ಡಿಎ/GBDA/Township-15(1)/2024-25,ದಿನಾಂಕ:18.02.2026.
5. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಬೆಂಅಪ್ರಾ/ಆ.ಯು/421:2026-27, ದಿನಾಂಕ:21.04.2026
6. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಬಿಎಂಆರ್‌ಡಿಎ/Township-18(3)/2025-26,ದಿನಾಂಕ:21.04.2026.

*****

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿನ ನಗರಗಳನ್ನು ಯೋಜನಾ ಬದ್ಧವಾಗಿ ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಕಲಂ -3 ರ ಉಪ ಕಲಂ (1) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರದೇಶಕ್ಕೆ ರಚಿಸಲಾಗಿರುವ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರವನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಮನಗರ ಜಿಲ್ಲೆ (ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆ), ರಾಮನಗರ ತಾಲ್ಲೂಕು, ಬಿಡದಿ

ಹೋಬಳಿಯ ಬೈರಮಂಗಲ, ಬನ್ನಿಗಿರಿ, ಹೊಸೂರು, ಕೆ.ಜಿ ಗೊಲ್ಲರಪಾಳ್ಯ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್ಯನಪಾಳ್ಯ, ಕಂಚುಗಾರನಹಳ್ಳಿ ಕಾವಲು, ಮಂಡಲಹಳ್ಳಿ ಹಾಗೂ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಭಾಗಶಃ ಗ್ರಾಮ ಸೇರಿ ಒಟ್ಟು 10 ಗ್ರಾಮಗಳ ವ್ಯಾಪ್ತಿಯ ಪ್ರದೇಶದಲ್ಲಿ "ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ" ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1987 ರ ಸೆಕ್ಷನ್ 15(1)(b) ಅಡಿಯಲ್ಲಿ ಅನುಮೋದನೆ ನೀಡಲಾಗಿದೆ.

ಮೇಲೆ (3) ಮತ್ತು (4) ರಲ್ಲಿ ಓದಲಾದ ಪತ್ರಗಳಲ್ಲಿ, ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 18(3) ರಡಿ ಅನುಮೋದನೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987ರ ಕಲಂ-17(1) ರನ್ವಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆಗಾಗಿ ಭೂಸ್ವಾಧೀನಗೊಳಿಸಲು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ:-

| **ಕ್ರ. ಸಂ** | **ಗ್ರಾಮದ ಹೆಸರು** | **ವಿಸ್ತೀರ್ಣ** | **ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ** |
|---|---|---|---|
| 1 | ಅರಳಾಳುಸಂದ್ರ | 1494.10½ | ಜಿಬಿಡಿಎ/ವಿ.ಭೂ.-1/05/2024-25, ದಿನಾಂಕ:12.03.2025 |
| 2 | ಬನ್ನಿಗಿರಿ | 174.7¾ | ಜಿಬಿಡಿಎ/ವಿ.ಭೂ.-1/02/2024-25, ದಿನಾಂಕ:12.03.2025 |
| 3 | ಭೈರಮಂಗಲ | 1131.15¼ | ಜಿಬಿಡಿಎ/ವಿ.ಭೂ.-1/01/2024-25, ದಿನಾಂಕ:12.03.2025 |
| 4 | ಕೆ.ಜಿ ಗೊಲ್ಲರಪಾಳ್ಯ | 314.35 | ಜಿಬಿಡಿಎ/ವಿ.ಭೂ.-1/03/2024-25, ದಿನಾಂಕ:12.03.2025 |
| 5 | ಹೊಸೂರು | 2544.34¼ | ಜಿಬಿಡಿಎ/ವಿ.ಭೂ.-1/03/2024-25, ದಿನಾಂಕ:12.03.2025 |
| 6 | ಮಂಡಲಹಳ್ಳಿ | 71.34 | ಜಿಬಿಡಿಎ/ವಿ.ಭೂ.-1/04/2024-25, ದಿನಾಂಕ:12.03.2025 |
| 7 | ಕೆಂಪಯ್ಯನಪಾಳ್ಯ | 359.15¼ | ಜಿಬಿಡಿಎ/ವಿ.ಭೂ.-1/02/2024-25, ದಿನಾಂಕ:12.03.2025 |
| 8 | ಕಂಚುಗಾರನಹಳ್ಳಿ | 784.37½ | ಜಿಬಿಡಿಎ/ವಿ.ಭೂ.-1/01/2024-25, ದಿನಾಂಕ:12.03.2025 |
| 9 | ವಡೇರಹಳ್ಳಿ | 65.32 | ಜಿಬಿಡಿಎ/ವಿ.ಭೂ.-1/04/2024-25, ದಿನಾಂಕ:12.03.2025 |
| **ಒಟ್ಟು** | | **7481ಎ-21½ಗು** | |

ಸದರಿ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ:13.03.2025 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಹಾಗೂ ದಿನಾಂಕ: 28.03.2025ರಂದು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ, ಈ ಸಂಬಂಧ ಆಕ್ಷೇಪಣೆಗಳನ್ನು ಪರಿಶೀಲಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಯೋಜನೆಯನ್ನು ಕಾರ್ಯಗತಗೊಳಿಸಲೇಬೇಕಾಗಿರುವುದರಿಂದ ಆಕ್ಷೇಪಣೆಗಳನ್ನು ತಳ್ಳಿಹಾಕಿ ಯೋಜನೆಯನ್ನು ಸಕ್ರಿಯಗೊಳಿಸಲು ತೀರ್ಮಾನಿಸಲಾಗಿದೆ.

ದಿನಾಂಕ: 03-12-2025 ರಂದು ನಡೆದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 8ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 8.5 ರಲ್ಲಿ ಕರ್ನಾಟಕ

ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987ರ ಕಲಂ 18(1) ರಡಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರದ ಅಭಿವೃದ್ಧಿ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 115 ಬಿಎಂಆರ್ 2024(ಇ), ದಿನಾಂಕ: 10.02.2025 ರನ್ವಯ ಬಿಎಂಆರ್ ವ್ಯಾಪ್ತಿಯ ಯೋಜನಾ ಪ್ರಾಧಿಕಾರಗಳಲ್ಲಿ ಸಂಗ್ರಹವಾಗಿರುವ ಒಟ್ಟು ಮೊತ್ತದ ಪೈಕಿ 1. ಕೆರೆ ಪುನರುಜ್ಜೀವನ ಶುಲ್ಕ, 2. ನೀರು ಸರಬರಾಜು ಯೋಜನಾ ಕರ, 3. ರಿಂಗ್ ರಸ್ತೆ ಕರ, 4. ಕೊಳಚೆ ಪ್ರದೇಶಗಳ ಉನ್ನತೀಕರಣ ಕರ ಹಾಗೂ MRTS ಉದ್ದೇಶದ ಕರಗಳನ್ನು ಹೊರತುಪಡಿಸಿ, ಉಳಿಕೆ ಶೇ.50 ರಷ್ಟು ಮೊತ್ತವನ್ನು ಗ್ರೇಟರ್ ಬೆಂಗಳೂರು ಅಭಿವದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲಾಗುತ್ತಿದೆ.

ಮುಂದುವರೆದು, ಆಯುಕ್ತರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರ ಪ್ರಸ್ತಾವನೆಯನ್ವಯ ಯೋಜನೆಯ ಕುರಿತು ಅವಶ್ಯವಿರುವ ಹಾಗೂ ಯೋಜನೆಯಿಂದ ಪ್ರಾಧಿಕಾರಕ್ಕೆ ಬರುವ ಆದಾಯದ ವಿವರಗಳನ್ನು ಒಳಗೊಂಡಂತೆ Financial Feasibility Report ಅನ್ನು ಸಲ್ಲಿಸಿದ್ದು, ಯೋಜನೆಯ ಭೂಸ್ವಾಧೀನಕ್ಕಾಗಿ ಹೊರಡಿಸಿರುವ ಅಧಿಸೂಚನೆಯನುಸಾರ ಖಾಸಗಿ ಮಾಲೀಕತ್ವದ ಜಮೀನುಗಳು ಹಾಗೂ ಸರ್ಕಾರಿ ಮಾಲೀಕತ್ವದ ಜಮೀನುಗಳ ಗ್ರಾಮವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.

| Details of the land village wise notified for Greater Bengaluru Integrated Township | | | | |
|---|---|---|---|---|
| **SL NO** | **Village** | **Total land under Govt ownership in acres and guntas** | **Total land under private ownership in acres and guntas** | **Total land notified in acres and guntas** |
| 1 | K.G Gollarapalya | 73-20-08 | 241-15-08 | 314-35-00 |
| 2 | Byramangla | 71-19-00 | 1060-04-04 | 1131-15-04 |
| 3 | Aralalusandra | 277-01-00 | 1217-09-08 | 1494-10-08 |
| 4 | Mandalahalli | 20-07-00 | 51-27-00 | 71-34-00 |
| 5 | Kempaiahanapalya | 57-02-00 | 302-13-04 | 359-15-04 |
| 6 | Kachugaranahalli | 05-11-00 | 779-26-08 | 784-37-08 |
| 7 | Bannigiri | 53-19-00 | 660-28-12 | 714-07-12 |
| 8 | Hosuru | 272-38-00 | 2271-36-04 | 2544-34-04 |
| 9 | Vaderahalli | NIL | 65-32-00 | 65-32-00 |
| **TOTAL** | | **830-37-08** | **6650-33-00** | **7481-21-08** |

ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ ಜಿಲ್ಲೆ ರವರು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಕಾಯ್ದೆ 2013ರ ಕಲಂ 26 ರನ್ವಯ ಭೂಮಾಲೀಕರೊಂದಿಗೆ ಸಮಾಲೋಚಿಸಿ, ಗ್ರಾಮವಾರು ಒಪ್ಪಂದದ ಐ-ತೀರ್ಪಿನಡಿಯಲ್ಲಿ ಭೂ ಪರಿಹಾರ ದರವನ್ನು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಶಿಫಾರಸ್ಸನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 8ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮ-2009ರನ್ವಯ ಅಭಿವೃದ್ಧಿಪಡಿಸಿದ ಜಮೀನಿನಲ್ಲಿ ಪ್ರಾಧಿಕಾರಕ್ಕೆ ಲಭ್ಯವಾಗುವ ವಿಸ್ತೀರ್ಣದ ಪೈಕಿ ಶೇಕಡ 44.5% ರಷ್ಟು ಅಭಿವೃದ್ಧಿ ಹೊಂದಿ ಮಾರಾಟ ಮಾಡಬಹುದಾದ ವಿಸ್ತೀರ್ಣವು (Saleable Area) ಲಭ್ಯವಾಗುವ ನಿರೀಕ್ಷೆಯಿದ್ದು, ಪ್ರತಿ ಎಕರೆಗೆ ಭೂಮಾಲೀಕರಿಗೆ 9693 ಚದರ ಅಡಿಗಳಲ್ಲಿ ವಸತಿ ನಿವೇಶನಗಳನ್ನು ಅಥವಾ 8723 ಚದರ ಅಡಿಗಳಲ್ಲಿ ವಾಣಿಜ್ಯ ನಿವೇಶನಗಳನ್ನು ಪರಿಹಾರ ರೂಪದಲ್ಲಿ ನೀಡಲು ನಿರ್ಣಯಿಸಲಾಗಿದೆ.

ಅದರಂತೆ, ಯೋಜನಾ ಪ್ರದೇಶದಲ್ಲಿ 830 ಎಕರೆ 37.08 ಗುಂಟೆ ಸರ್ಕಾರಿ ಜಮೀನಿದ್ದು, ದಿನಾಂಕ:10.02.2025ರ ಆದೇಶದನ್ವಯ, ಚಾಲ್ತಿ ಮಾರ್ಗಸೂಚಿ ದರಗಳ ಶೇ.50% ರಷ್ಟನ್ನು ಪಾವತಿಸಿ ಜಮೀನನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಅನುಮೋದಿಸಲಾಗಿದ್ದು, ಇದಕ್ಕಾಗಿ ರೂ. 121.47 ಕೋಟಿಗಳು ಹಾಗೂ 6650 ಎಕರೆ 33 ಗುಂಟೆ ವಿಸ್ತೀರ್ಣದ ಖಾಸಗಿ ಜಮೀನುಗಳಲ್ಲಿ ಶೇ.50 ರಷ್ಟು ವಿಸ್ತೀರ್ಣಕ್ಕೆ ನಗದು ಪರಿಹಾರ ಪಾವತಿಸಬೇಕಾದಲ್ಲಿ ಅವಶ್ಯವಿರುವ ರೂ. 8959.87 ಕೋಟಿಗಳು ಸೇರಿದಂತೆ ಒಟ್ಟು ರೂ.9081.34 ಕೋಟಿಗಳನ್ನು ಅಂದಾಜಿಸಲಾಗಿರುತ್ತದೆ.

ಈ ಯೋಜನೆಯಲ್ಲಿ 1800 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆಯನ್ನು ಮತ್ತು 5681 ಎಕರೆ ಪ್ರದೇಶದಲ್ಲಿ ಬೃಹತ್ ಏಕ ನಿವೇಶನಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಏಕ ನಿವೇಶನಗಳಲ್ಲಿ ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಅನುವು ಮಾಡಿಕೊಡಲು ಹಾಗೂ ಸದರಿ ಕಟ್ಟಡಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅನುವು ಮಾಡಿಕೊಡಲು ಉದ್ದೇಶಿಸಲಾಗಿದೆ. 1800 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಬಡಾವಣೆಯನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 86 ಆರ್‌ಡಿಎಫ್ 2022, ದಿನಾಂಕ:15.11.2023 ರಲ್ಲಿನ ಮಾರ್ಗಸೂಚಿಗಳನುಸಾರ ಪ್ರತಿ ಎಕರೆಗೆ ಎಲ್ಲಾ ರೀತಿಯ ವೆಚ್ಚಗಳನ್ನು ಒಳಗೊಂಡಂತೆ ಅಂದಾಜು ರೂ.1.5 ಕೋಟಿಗಳನ್ನು ಹಾಗೂ ಬೃಹತ್ ಏಕ ನಿವೇಶನಗಳ ಅಭಿವೃದ್ಧಿಗೆ ಎಕರೆಗೆ ರೂ.0.66 ಕೋಟಿಗಳನ್ನು ಅಂದಾಜಿಸಲಾಗಿದೆ. ಅದರನ್ವಯ ಭೂಮಾಲೀಕರಿಗೆ ಪರಿಹಾರ ರೂಪದಲ್ಲಿ ನೀಡುವ ವಸತಿ ನಿವೇಶನಗಳ ಅಭಿವೃದ್ಧಿಗಾಗಿ ಸುಮಾರು 2827 ಕೋಟಿ ಹಾಗೂ ಬೃಹತ್ ಏಕ ನಿವೇಶನಗಳ ಅಭಿವೃದ್ಧಿಗಾಗಿ ಸುಮಾರು 3753 ಕೋಟಿ ಒಟ್ಟು ಅಭಿವೃದ್ಧಿ ವೆಚ್ಚ 6580 ಕೋಟಿಗಳಾಗಿ ಅಂದಾಜಿಸಲಾಗಿದೆ.

ಈ ಯೋಜನಾ ಅನುಷ್ಠಾನ/ಅಭಿವೃದ್ಧಿ ಅವಧಿಯಲ್ಲಿ ಸಾಲದ ಮೊತ್ತಕ್ಕೆ ನೀಡಬೇಕಾದಂತಹ ಬಡ್ಡಿ ಮೊತ್ತ ಅಂದರೆ IDCP-Interest During Construction Period ಅನ್ನು ಸರ್ಕಾರದಿಂದ ಭರಿಸಬೇಕಾಗಿದ್ದು, ಮೂರು ವರ್ಷಗಳ ಅವಧಿಗೆ ಈ ಯೋಜನೆಗಾಗಿ ಸರ್ಕಾರದಿಂದ ಒಟ್ಟು ರೂ.2443 ಕೋಟಿಗಳ ಅನುದಾನವನ್ನು ಕೋರಲಾಗುತ್ತಿದೆ.

ಎಲ್ಲಾ ಮೂಲಗಳಿಂದ ಕ್ರೋಢೀಕರಿಸಿದ ಸಂಪನ್ಮೂಲಗಳು ಹಾಗೂ ಬಾಹ್ಯ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಕ್ಕೆ ನೀಡಬೇಕಾದ ಬಡ್ಡಿ ರೂ.3897 ಕೋಟಿಗಳು ಸೇರಿ ಒಟ್ಟು ರೂ.22001 ಕೋಟಿಗಳ ಯೋಜನಾ ವೆಚ್ಚವನ್ನು ಅಂದಾಜಿಸಲಾಗಿದೆ,

ಸರ್ಕಾರದ ದಿನಾಂಕ:10.02.2025ರ ಆದೇಶದನ್ವಯ, ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಆರ್ಥಿಕ ಸಂಪನ್ಮೂಲಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಲು ಯೋಜಿಸಲಾಗಿದೆ.

| **ಕ್ರ.ಸಂ** | **ಆರ್ಥಿಕ ಸಂಪನ್ಮೂಲಗಳ ವಿವರ** | **ಮೊತ್ತ (ಕೋಟಿ ರೂ.ಗಳಲ್ಲಿ)** |
|---|---|---|
| 1 | ಆಂತರಿಕ - ಬೆಂ.ಮ.ಪ್ರ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳಿಂದ ಪಡೆಯುವ ಮೊತ್ತ | 1150 |
| 2 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯಲು ಉದ್ದೇಶಿಸಿರುವ ಮೊತ್ತ | 2000 |

| | | |
|---|---|---|
| 3 | ಬೆಂ.ಮ.ಪ್ರ.ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸಿ.ಎ ನಿವೇಶನಗಳ ನಗಧೀಕರಣ -ಬ್ಯಾಂಕ್‌ನಿಂದ ಅಡಮಾನ ಸಾಲ | 3500 |
| 4 | ಹುಡ್ಕೋ ಬ್ಯಾಂಕ್ ನಿಂದ ಸಾಲ | 9011 |

ಆಂತರಿಕವಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಇತರೆ ಯೋಜನಾ ಪ್ರಾಧಿಕಾರಗಳಲ್ಲಿ ಬಳಕೆಯಾಗದೇ ಇದ್ದಂತಹ ಮೊತ್ತಗಳ ಪೈಕಿ ಶೇಕಡಾ 50% ರಷ್ಟು ಮೊತ್ತವನ್ನು ಈಗಾಗಲೇ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪಡೆಯಲಾಗಿದೆ. ಮುಂದುವರೆದು, ಮುಂದಿನ ಮೂರು ವರ್ಷಗಳಲ್ಲಿ ನಿರೀಕ್ಷಿಸಿರುವ ಮೊತ್ತವನ್ನು ಸಹ ಈ ಪ್ರಸ್ತಾವನೆಯಲ್ಲಿ ಪರಿಗಣಿಸಿದೆ. ಅಂತೆಯೇ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಇತರೆ ಯೋಜನಾ ಪ್ರಾಧಿಕಾರಗಳಲ್ಲಿನ ನಾಗರೀಕ ಸೌಲಭ್ಯ ನಿವೇಶನಗಳನ್ನು ನಗಧೀಕರಣಗೊಳಿಸಿ ಸಂಪನ್ಮೂಲ ಕ್ರೋಢೀಕರಿಸಲಾಗುವುದು.

ಪ್ರಸ್ತಾಪಿತ ಉಪನಗರ ಯೋಜನೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ದೇಶಗಳಿಗೆ ಪೂರಕವಾಗಿರುವುದರಿಂದ, ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಆಯುಕ್ತರು, ಬಿಡಿಎ ರವರು ಸಹಮತಿ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಸದರಿ ಪ್ರಾಧಿಕಾರವು ಯೋಜನೆಯ ಪಾಲುದಾರರಾಗಿರುವುದರಿಂದ, ಅಭಿವೃದ್ಧಿಪಡಿಸಲಾಗುವ ಜಮೀನುಗಳಲ್ಲಿ ಸುಮಾರು 368 ಎಕರೆ ಪ್ರದೇಶವನ್ನು ಬಿ.ಡಿ.ಎ ಗೆ ನೀಡಬಹುದಾಗಿರುತ್ತದೆ.

ಯೋಜನೆಗಾಗಿ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, 03 ವರ್ಷಗಳ ಅವಧಿಯಲ್ಲಿ ಭೂಸ್ವಾಧೀನ ಹಾಗೂ ಅಭಿವೃದ್ಧಿಗಾಗಿ ವೆಚ್ಚ ಮಾಡಲು ಯೋಜಿಸಲಾಗಿದೆ. ಈ ಯೋಜನೆಯಿಂದ ಪ್ರಾಧಿಕಾರಕ್ಕೆ ಮೂರನೇ ವರ್ಷದಿಂದ ಆದಾಯ ಬರುವ ನಿರೀಕ್ಷೆಯಿರುತ್ತದೆ, ಈ ಯೋಜನೆಯನ್ನು ಅನುಷ್ಠಾನಗೊಳಿಸಿ ಅಭಿವೃದ್ಧಿಪಡಿಸಿದ ನಿವೇಶನ/ಭೂಮಿಯ ಹಂಚಿಕೆಯಿಂದ ದೊರಕುವ ಆದಾಯ ಮತ್ತು KUDA ಕಾಯ್ದೆ-1987ರಲ್ಲಿನ ಅವಕಾಶಗಳನುಸಾರ ಪ್ರಾಧಿಕಾರವು ಪುರಸಭೆ ಕಾರ್ಯವನ್ನು ನಿರ್ವಹಿಸುವುದರಿಂದ ನಿರೀಕ್ಷಿಸಿರುವ ಆದಾಯವನ್ನು ಸೇರಿಸಿ, ಒಟ್ಟಾರೆ ಯೋಜನೆಯಿಂದ **ಅ)** ಅಭಿವೃದ್ಧಿಪಡಿಸಿದ ಜಮೀನು/ನಿವೇಶನಗಳ ವಿಕ್ರಯದಿಂದ, **ಆ)** ಆಸ್ತಿ ತೆರಿಗೆಯಿಂದ ಮತ್ತು **ಇ)** ಪ್ರೀಮಿಯಂ ಎಫ್.ಎ.ಆರ್ ನ ರೂಪಗಳಲ್ಲಿ ಒಟ್ಟಾರೆ ರೂ.33562 ಕೋಟಿಗಳಷ್ಟು ಆದಾಯವನ್ನು ನಿರೀಕ್ಷಿಸಬಹುದಾಗಿದೆ, ಒಟ್ಟಾರೆ ಯೋಜನೆಯ ಆರ್ಥಿಕ ಕಾರ್ಯಸಾಧ್ಯತೆಯ ವಿವರಗಳ ವರದಿಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಐ-ಡೆಕ್ ಸಂಸ್ಥೆಯಿಂದ ಸಿದ್ಧಪಡಿಸಲಾಗಿರುತ್ತದೆ.

ಸಮಗ್ರ ಉಪನಗರದ ಯೋಜನೆ ಮತ್ತು ವಿನ್ಯಾಸ ಕಾರ್ಯಕ್ಕಾಗಿ ಅಂತರಾಷ್ಟ್ರೀಯ ಮಟ್ಟದ ಹೊಸ ಉಪನಗರಗಳನ್ನು ನಿರ್ಮಿಸಿರುವ ಅನುಭವವುಳ್ಳ ಸಂಸ್ಥೆಯನ್ನು ಜಾಗತಿಕ ಟೆಂಡರ್ ಮುಖೇನ ಗುರುತಿಸಿ ಯೋಜನೆ ಮತ್ತು ವಿನ್ಯಾಸ ಕ್ರಮವನ್ನು ಕೈಗೊಂಡು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಂತಹ ಸಂಸ್ಥೆಯನ್ನು ಗುರುತಿಸಿ, ಅನುಷ್ಠಾನಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಪ್ರಸ್ತುತ ಸಮಗ್ರ ಉಪನಗರದ ಪೂರ್ಣ ಪ್ರದೇಶಗಳನ್ನು ಒಳಗೊಂಡಂತೆ Concept Master Plan ಅನ್ನು ಹಾಗೂ ಚಾಲ್ತಿ ದರಗಳನುಸಾರ ಅಭಿವೃದ್ಧಿಗೆ ಬೇಕಾದಂತಹ ಮೊತ್ತದ ವಿವರಗಳನ್ನು Abstract Estimation ನೊಂದಿಗೆ ಸಲ್ಲಿಸಿರುತ್ತಾರೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಅನುಷ್ಠಾನಗೊಳಿಸಲು ಜಾಗತಿಕ ಮಟ್ಟದಲ್ಲಿ ಅಂತರಾಷ್ಟ್ರೀಯ ಮಾನದಂಡಗಳ ಅನುಸಾರವಾಗಿ ಕಾರ್ಯಾನುಷ್ಠಾನಗೊಳಿಸಲು ಪೂರಕವಾಗುವಂತೆ

ದಿನಾಂಕ:10.02.2025ರ ಆದೇಶ ಭಾಗದ 5ನೇ ಕಂಡಿಕೆಯಲ್ಲಿನ ಅನುಮೋದನೆಯಂತೆ ಯೋಜನೆ ನಿರ್ವಹಣೆ ಸಮಾಲೋಚಕ PMC for selection of consultant for preparation of Master plan, Detailed Project Reports(DPRs) and Project Mangement Consultancy(PMC) Services for Greater Bengaluru Integrated Township(GBIT), Bidadi ಗಾಗಿ ಅರ್ಹ ಸಂಸ್ಥೆಯನ್ನು ಗುರುತಿಸುವ ಸಂಬಂಧ ಯೋಜನೆಯ ಅಭಿವೃದ್ಧಿಗಳಿಗೆ ನಿರೀಕ್ಷಿತ ವೆಚ್ಚದ ಕನಿಷ್ಠ ಶೇ.1% ರಷ್ಟು ಪರಿಗಣಿಸಿದಲ್ಲಿ ಯೋಜನೆಯ ಮೊತ್ತಕ್ಕೆ ರೂ.62.24 ಕೋಟಿಗಳಷ್ಟು ಆಗಬಹುದಾಗಿರುವುದರಿಂದ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆಯನ್ವಯ ಅನುಮೋದನೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಪ್ರಸ್ತಾಪಿತ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯು ಕೇವಲ ವಸತಿ ಯೋಜನೆಯಾಗಿರದೇ ಕೈಗಾರಿಕೆ, ವಾಣಿಜ್ಯ ಮತ್ತು ವಸತಿ ಸಮುಚ್ಚಯಗಳನ್ನು ಒಳಗೊಂಡಂತೆ ದೂರ ದೃಷ್ಠಿಕೋನವನ್ನು ಹೊಂದಿರುವ ಒಂದು ಸಮಗ್ರ ಯೋಜನೆಯಾಗಿರುತ್ತದೆ. ಬೆಂಗಳೂರು ಮಹಾನಗರವು ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆ, ವಾಣಿಜ್ಯ ಚಟುವಟಿಕೆಗಳು ಹಾಗೂ ವಾಹನ ಸಂಚಾರದ ಪರಿಣಾಮವಾಗಿ ಮೂಲಸೌಕರ್ಯಗಳ ಮೇಲೆ ತೀವ್ರ ಒತ್ತಡವನ್ನು ಅನುಭವಿಸುತ್ತಿದ್ದು, ಈ ಯೋಜನೆಯ ಅನುಷ್ಠಾನದಿಂದಾಗಿ ಸಂಚಾರ ದಟ್ಟಣೆ, ವಾಯು ಮತ್ತು ಶಬ್ದ ಮಾಲಿನ್ಯವನ್ನು ತಡೆಗಟ್ಟುವುದರೊಂದಿಗೆ ಯೋಜಿತ ನಗರ ಬೆಳವಣಿಗೆಗೆ ಸಹಕಾರಿಯಾಗಲಿರುವುದರಿಂದ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987ರ ಕಲಂ-18(3)ರಡಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987ರ ಕಲಂ-18(3)ರಡಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಆ) ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಕಾಯ್ದೆಯ 2013ರ ಕಲಂ 26 ರಲ್ಲಿನ ಅವಕಾಶಗಳನುಸಾರ ನಿಗಧಿಪಡಿಸಿರುವ ಭೂಪರಿಹಾರವನ್ನು ಪಾವತಿಸಿ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮ-2009ರ ಅನುಸಾರ ಅಭಿವೃದ್ಧಿಪಡಿಸಿದ ಜಮೀನಿನಲ್ಲಿ ಭೂಸ್ವಾಧೀನಗೊಂಡ ಪ್ರತಿ ಎಕರೆಗೆ 9693 ಚದರ ಅಡಿಗಳ ವಸತಿ ನಿವೇಶನ ಅಥವಾ 8723 ಚದರ ಅಡಿಗಳ ವಾಣಿಜ್ಯ ನಿವೇಶನವನ್ನು ಪರಿಹಾರವಾಗಿ ನೀಡಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಇ) ಸರ್ಕಾರದ ಆದೇಶ ಸಂಖ್ಯೆ: ನಅಇ 115 ಬಿಎಂಆರ್ 2024 (ಇ), ದಿನಾಂಕ:10.02.2025ರಲ್ಲಿ ಅನುಮೋದಿಸಿದಂತೆ ಭೂಸ್ವಾಧೀನ ವೆಚ್ಚಗಳಿಗಾಗಿ ಹುಡ್ಕೋ ಸಂಸ್ಥೆಯಿಂದ ರೂ.9011 ಕೋಟಿಗಳ ಸಾಲವನ್ನು ಪಡೆಯಲು ಅನುಮೋದನೆ ಹಾಗೂ ಪಡೆಯುವ ಸಾಲ ಮತ್ತು ಅದಕ್ಕೆ ತಗಲುವ ಬಡ್ಡಿ ಮೊತ್ತಕ್ಕೆ ಸರ್ಕಾರದ ಗ್ಯಾರಂಟಿ ಕೊಡಿಸುವ ಬಗ್ಗೆ.

ಈ) ಸರ್ಕಾರದ ಆದೇಶ ಸಂಖ್ಯೆ: ನಅಇ 115 ಬಿಎಂಆರ್ 2024 (ಇ), ದಿನಾಂಕ:10.02.2025ರಲ್ಲಿ ಅನುಮೋದಿಸಿದಂತೆ ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿನ ಪ್ರಾಧಿಕಾರಗಳ ಸ್ವತ್ತುಗಳ ಸೂಕ್ತ ನಗಧೀಕರಣ ಅಂದರೆ ಅಡಮಾನ ಸಾಲವನ್ನು ಬ್ಯಾಂಕ್‌ಗಳಿಂದ ರೂ.3500 ಕೋಟಿಗಳ ಸಾಲವನ್ನು ಪಡೆಯಲು ಅನುಮೋದನೆ ಹಾಗೂ ಪಡೆಯುವ ಸಾಲ ಮತ್ತು ಅದಕ್ಕೆ ತಗುಲುವ ಬಡ್ಡಿ ಮೊತ್ತಕ್ಕೆ ಸರ್ಕಾರದ ಗ್ಯಾರಂಟಿ ಕೊಡಿಸುವ ಬಗ್ಗೆ.

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಅಭಿವೃದ್ಧಿಗಾಗಿ ರೂ.2250 ಕೋಟಿಗಳನ್ನು ಯೋಜನೆಯಲ್ಲಿ Equity ರೂಪದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರವು ನಿರ್ಧರಿಸುವ ಮಾನದಂಡಗಳನುಸಾರ ದೊರಕಿಸಿಕೊಡುವ ಬಗ್ಗೆ.

ಊ) ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಬೀಜನಿಧಿಯಾಗಿ ಮೂರು ವರ್ಷಗಳ ಅವಧಿಯಲ್ಲಿ ರೂ.2443 ಕೋಟಿ ಅನುದಾನವನ್ನು ಸರ್ಕಾರದಿಂದ ಒದಗಿಸುವ ಬಗ್ಗೆ.

ಋ) Selection of Consultant for preparation of Master Plan, Detailed Project Reports (DPRs) and Project Management Consultancy (PMC) services for Greater Bengaluru Integrated Township (GBIT), Bidadi, ಗಾಗಿ ಅರ್ಹ ಸಂಸ್ಥೆಯನ್ನು ಗುರುತಿಸುವ ಸಂಬಂಧ ಯೋಜನೆಯ ಅಭಿವೃದ್ಧಿಗಳಿಗೆ ನಿರೀಕ್ಷಿತ ವೆಚ್ಚದ ಕನಿಷ್ಠ ಶೇ.1% ರಷ್ಟು ಪರಿಗಣಿಸಿದಲ್ಲಿ ಯೋಜನೆಯ ಮೊತ್ತಕ್ಕೆ ರೂ.65.80 ಕೋಟಿಗಳಷ್ಟು ಆಗಬಹುದಾಗಿರುವುದರಿಂದ ಸರ್ಕಾರದ ಆಡಳಿತಾತ್ಮಕ ಅನುಮೋದನೆ.

ಮೇಲೆ(5) ರಲ್ಲಿ ಓದಲಾದ ಪತ್ರದಲ್ಲಿ, ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆಯಲ್ಲಿ (SPV) ಪಾಲುದಾರರಾಗಲು ರೂ.3000/- ಕೋಟಿಗಳನ್ನು ಪ್ರಾಧಿಕಾರದಿಂದ ಬಂಡವಾಳ (Equity) ಹೂಡಿಕೆ ಮಾಡುವುದಾಗಿ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ತಿಳಿಸಿರುತ್ತಾರೆ.

ಮುಂದುವರೆದು, ಪ್ರಸ್ತಾಪಿತ ಯೋಜನೆಯ ಯೋಜನಾ ವೆಚ್ಚದ ಶೇ.1 ರಷ್ಟು ಮೊತ್ತವನ್ನು ಪಾವತಿಸುವುದು ಸಮರ್ಥನೀಯವೆಂದು ಕಂಡುಬರದ ಕಾರಣ ಅರ್ಹ ಯೋಜನಾ ನಿರ್ವಹಣಾ ಸಮಾಲೋಚಕ ಸಂಸ್ಥೆಯನ್ನು(PMC) ಒಟ್ಟಾರೆ ಅಭಿವೃದ್ಧಿ ಮೊತ್ತದ ಶೇ.0.5 ರ ಮಿತಿಯೊಳಗೆ, ನಿಖರವಾದ ಜವಾಬ್ದಾರಿ ಹಾಗೂ ಅಂದಾಜುಗಳನ್ನು ತಯಾರಿಸಿ, KTPP ಕಾಯ್ದೆ ಮತ್ತು ನಿಯಮಗಳನ್ವಯ ನೇಮಿಸಿಕೊಳ್ಳಲು ನಗರಾಭಿವೃದ್ಧಿ ಇಲಾಖೆ (ಬೆಂಗಳೂರು ಅಭಿವೃದ್ಧಿ)ಗೆ ಅಧಿಕಾರವನ್ನು ಪ್ರತ್ಯಾಯೋಜಿಸುವುದು ಸೂಕ್ತವಾಗಿರುತ್ತದೆ.

ಮೇಲೆ (6) ರಲ್ಲಿ ಓದಲಾದ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ರವರು ಈ ಕೆಳಕಂಡಂತೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೂ.3000ಕೋಟಿ ಮೊತ್ತವನ್ನು Equity ರೂಪದಲ್ಲಿ ಭರಿಸಲು ಹಾಗೂ ಸದರಿ ಹೂಡಿಕೆಯನ್ನು ಸರ್ಕಾರವು ನಿರ್ಧರಿಸುವ ರೀತಿಯಲ್ಲಿ ಹಿಂಭರಿಸಲು ಸಹಮತಿ ನೀಡಿರುತ್ತಾರೆ.

ಸರ್ಕಾರದ ಗ್ಯಾರಂಟಿ ಇಲ್ಲದೆ HUDCO ವತಿಯಿಂದ ರೂ.9011ಕೋಟಿ ಮೊತ್ತವನ್ನು ಸಾಲ ಮಂಜೂರು ಮಾಡುವಂತೆ ಕೋರಲಾಗಿ, HUDCO ಸಂಸ್ಥೆಯು ಯೋಜನೆಯ ಒಟ್ಟು ಸಾಲದ ಮೊತ್ತ 12511 ಕೋಟಿಗಳಲ್ಲಿ 5050 ಕೋಟಿಗಳನ್ನು ಮಾತ್ರ ಸರ್ಕಾರದ ಗ್ಯಾರಂಟಿ ಇಲ್ಲದೆ ನೀಡಬಹುದಾಗಿ ತಿಳಿಸಿರುತ್ತದೆ.

ಆದ್ದರಿಂದ, ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಆರ್ಥಿಕ ಸಂಪನ್ಮೂಲಗಳನ್ನು ಈ ಕೆಳಕಂಡಂತೆ ಕ್ರೋಢೀಕರಿಸಲು ಉದ್ದೇಶಿಸಲಾಗಿರುತ್ತದೆ.

| **ಕ್ರ.ಸಂ** | **ಆರ್ಥಿಕ ಸಂಪನ್ಮೂಲಗಳ ವಿವರ** | **ಮೊತ್ತ (ಕೋಟಿ ರೂ.ಗಳಲ್ಲಿ)** | **ಷರಾ** |
|---|---|---|---|
| 1 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯಲು ಉದ್ದೇಶಿಸಿರುವ ಮೊತ್ತ | 3000 | ಬಿ.ಡಿ.ಎ ದಿಂದ Equity ರೂಪದಲ್ಲಿ ಪಡೆಯಲು ಸರ್ಕಾರದ ಅನುಮೋದನೆ ಕೋರಲಾಗುತ್ತಿದೆ. |
| 2 | ಬೆಂ.ಮ.ಪ್ರ.ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸಿ.ಎ ನಿವೇಶನಗಳ ನಗಧೀಕರಣ –ಬ್ಯಾಂಕ್‌ನಿಂದ ಅಡಮಾನ ಸಾಲ | 3650 | ಸರ್ಕಾರದ ಗ್ಯಾರಂಟಿ ಇಲ್ಲದೇ ಸಾಲ ಪಡೆಯಲಾಗುತ್ತದೆ. |
| 3 | ಹುಡ್ಕೋ ಬ್ಯಾಂಕ್‌ನಿಂದ ಸಾಲ | 9011 | -ಸರ್ಕಾರದಿಂದ ಸದರಿ ಸಾಲದ ಮೊತ್ತ ಹಾಗೂ ಬಡ್ಡಿಗೆ ಗ್ಯಾರಂಟಿ ಕೋರಲಾಗುತ್ತಿದೆ. |
| **ಒಟ್ಟು** | | **15,661** | **IDCP ಬಾಬ್ತು ಮೊತ್ತವನ್ನು ಒಳಗೊಂಡಿರುವುದಿಲ್ಲ.** |

ಯೋಜನೆಗಾಗಿ ಸರ್ಕಾರದಿಂದ ಕೋರಲಾಗಿದ್ದ ಒಟ್ಟು ರೂ.2472 ಕೋಟಿಗಳ ಬೀಜ ನಿಧಿ ಅನುದಾನದ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಯೋಜನೆ ಕುರಿತಂತೆ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ಈ ಹಿಂದಿನ ಪ್ರಸ್ತಾವನೆಯಲ್ಲಿ ಕೋರಿದ ಅಂಶಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

1. ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಒಟ್ಟು 18133 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿರುತ್ತಾರೆ.
2. ಬಿ.ಡಿ.ಎ ಯಿಂದ ರೂ.3000ಕೋಟಿಗಳ ಬಂಡವಾಳ ಹೂಡಿಕೆ ರೂಪದಲ್ಲಿ ಪಾಲ್ಗೊಳ್ಳಲು ಹಾಗೂ ಸದರಿ ಹೂಡಿಕೆಯನ್ನು ಸರ್ಕಾರ ನಿರ್ಧರಿಸುವ ರೀತಿಯಲ್ಲಿ ಹಿಂಭರಿಸುವ ಬಗ್ಗೆ ಅನುಮೋದನೆ ನೀಡಲು.
3. HUDCO ಸಂಸ್ಥೆಯು ಯೋಜನೆಗೆ ಮಂಜೂರಾಗಿದ್ದ ರೂ.12511ಕೋಟಿ ಮೊತ್ತಕ್ಕೆ ಬದಲಾಗಿ ಸರ್ಕಾರದ ಗ್ಯಾರಂಟಿ ಇಲ್ಲದ ಪಕ್ಷದಲ್ಲಿ ರೂ.5050.04 ಕೋಟಿ ಮೊತ್ತದ ಸಾಲವನ್ನು ಮಾತ್ರ ನೀಡಲು ಅವಕಾಶವಿರುವುದಾಗಿ ತಿಳಿಸಿದ್ದು, ಹುಡ್ಕೋ ಸಂಸ್ಥೆಯಿಂದ ಒಟ್ಟು ರೂ.12661 ಕೋಟಿಗಳ ಸಾಲವನ್ನು ಪಡೆಯಲು ಅನುಮೋದನೆ, ಈ ಪೈಕಿ ರೂ.3650 ಕೋಟಿಗಳನ್ನು ಅಡಮಾನ ಸಾಲವಾಗಿ (ಯಾವುದೇ ಸರ್ಕಾರಿ ಭದ್ರತೆ ಇಲ್ಲದೆ) ಹಾಗೂ ರೂ.9011 ಕೋಟಿಗಳ ಸಾಲದ ಮೊತ್ತಕ್ಕೆ (ಬಡ್ಡಿ ಸೇರಿದಂತೆ) ರಾಜ್ಯ ಸರ್ಕಾರದ ಗ್ಯಾರಂಟಿ (ಭದ್ರತೆ) ಯನ್ನು ನೀಡುವಂತೆ ಕೋರಿರುತ್ತಾರೆ.

ಅದರಂತೆ ಮೇಲ್ಕಂಡ ಅಂಶಗಳನ್ವಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 63 ಬಿಎಂಆರ್ 2026(ಇ), ಬೆಂಗಳೂರು ದಿನಾಂಕ:07-05-2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಅನುಷ್ಠಾನಗೊಳಿಸಲು ಈ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬೈರಮಂಗಲ, ಬನ್ನಿಗಿರಿ, ಹೊಸೂರು, ಕೆ.ಜಿ ಗೊಲ್ಲರಪಾಳ್ಯ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್ಯನಪಾಳ್ಯ, ಮಂಡಲಹಳ್ಳಿ ಹಾಗೂ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಭಾಗಶಃ ಒಟ್ಟು 09 ಗ್ರಾಮಗಳ ಸುಮಾರು 7481 ಎಕರೆ – 21.08 ಗುಂಟೆ ಪ್ರದೇಶದಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯನ್ನು ಅಂದಾಜು ರೂ. 18,133 ಕೋಟಿ(ರೂಪಾಯಿ ಹದಿನೆಂಟು ಸಾವಿರದ ಒಂದುನೂರ ಮೂವತ್ತು ಮೂರು ಕೋಟಿ ಮಾತ್ರ) ಮೊತ್ತದಲ್ಲಿ ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 18(3) ರಡಿ ಅನುಮೋದನೆ ನೀಡಲು;

2. ಈ ಯೋಜನೆಗೆ ಅಗತ್ಯವಿರುವ ಅರ್ಹ ಯೋಜನಾ ನಿರ್ವಹಣಾ ಸಮಾಲೋಚಕ ಸಂಸ್ಥೆಯನ್ನು (PMC) ನಿಖರವಾದ ಜವಾಬ್ದಾರಿ ಹಾಗೂ ಅಂದಾಜುಗಳನ್ನು ತಯಾರಿಸಿ, ಒಟ್ಟಾರೆ ಅಭಿವೃದ್ಧಿ ಮೊತ್ತದ ಶೇ.0.5 ರ ಮಿತಿಯೊಳಗೆ, KTPP ಕಾಯ್ದೆ ಮತ್ತು ನಿಯಮಗಳನ್ವಯ ನೇಮಿಸಿಕೊಳ್ಳಲು ನಗರಾಭಿವೃದ್ಧಿ ಇಲಾಖೆ (ಬೆಂಗಳೂರು ಅಭಿವೃದ್ಧಿ)ಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು.

3. ಭೂಮಾಲೀಕರಿಗೆ The Right to Fair Compensation and Transparency In Land Acquisition, Rehabilitation and Resettlement Act 2013ರ ರನ್ವಯ ನಗದು ಪರಿಹಾರ ಅಥವಾ The Karnataka Urban Development Authorities (Allotment of Sites in Lieu of Compensation for the land Acquired) Rules 2009 ರ ನಿಯಮ 3 ರನ್ವಯ ಭೂಸ್ವಾಧೀನಗೊಂಡ ಪ್ರತಿ ಎಕರೆಗೆ 9693 ಚದರ ಅಡಿಗಳ ಅಭಿವೃದ್ಧಿಪಡಿಸಿದ ವಸತಿ ನಿವೇಶನವನ್ನು ಪರಿಹಾರವಾಗಿ ನೀಡಲು.

4. ಭೂಮಾಲೀಕರು ಇಚ್ಛಿಸಿದ್ದಲ್ಲಿ, ಅರ್ಹತೆ ಮಾನದಂಡವನ್ನು ನಿಗದಿಪಡಿಸಿ, ಭೂಪರಿಹಾರ ರೂಪದಲ್ಲಿ ಒಂದು ಎಕರೆಗೆ ಎಷ್ಟು ಚದರ ಅಡಿ ವಾಣಿಜ್ಯ ಏಕನಿವೇಶನ ನೀಡಬೇಕು ಮತ್ತು ಎಷ್ಟು ಏಕರೆ ಭೂಮಿಯನ್ನು ಈ ಉದ್ದೇಶಕ್ಕಾಗಿ ನಿಗದಿಪಡಿಸಬೇಕೆಂದು ರಾಜ್ಯ ಸರ್ಕಾರವು Project Monitoring Unit ವರದಿ ಆಧರಿಸಿ ತೀರ್ಮಾನಿಸಲು.

5. ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯ ಅನುಷ್ಠಾನಕ್ಕಾಗಿ ಪಡೆಯಲಾಗುವ ಒಟ್ಟು ರೂ.12,511 ಕೋಟಿಗಳ ಸಾಲದ ಪೈಕಿ ರೂ.7,500 ಕೋಟಿಗಳಿಗೆ ಮಾತ್ರ ಸರ್ಕಾರದ ಖಾತರಿ ನೀಡಲು ಹಾಗೂ ಉಳಿಕೆ ಮೊತ್ತವನ್ನು ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿನ ಪ್ರಾಧಿಕಾರಗಳ ಸ್ವತ್ತುಗಳ ಸೂಕ್ತ ನಗದೀಕರಣ ಅಂದರೆ ಅಡಮಾನ ಮೂಲಕ ಹಣಕಾಸು ಸಂಸ್ಥೆ/ ಬ್ಯಾಂಕ್‌ಗಳಿಂದ ನಿಯಮಾನುಸಾರ ಸಾಲವನ್ನು ಪಡೆಯಲು;

6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗಾಗಿ ರೂ.3000 ಕೋಟಿಗಳನ್ನು ಯೋಜನೆಯಲ್ಲಿ Equity ರೂಪದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪಡೆಯಲು ಹಾಗೂ ಸರ್ಕಾರವು ನಿರ್ಧರಿಸುವ ರೂಪದಲ್ಲಿ ಮತ್ತು ಪ್ರಮಾಣದಲ್ಲಿ Equity ಯನ್ನು ಹಿಂಭರಿಸಲು;

7. ಯೋಜನೆ ಅನುಷ್ಠಾನಕ್ಕಾಗಿ ಬಿ.ಎಂ.ಆರ್ ವ್ಯಾಪ್ತಿಯ ಯೋಜನಾ ಪ್ರಾಧಿಕಾರಗಳ ನಿಧಿಯಿಂದ ಸಂಪನ್ಮೂಲ ಕ್ರೋಢೀಕರಿಸುವ ಪ್ರಸ್ತಾವನೆಯನ್ನು ಕೈಬಿಟ್ಟು ಯೋಜನಾ ಪ್ರಾಧಿಕಾರಗಳಿಂದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪಡೆದಿರುವ ಹಣವನ್ನು ಹಿಂದಿರುಗಿಸಲು;

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



8. ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯ ವ್ಯಾಪ್ತಿಯಲ್ಲಿ ಏಕ ನಿವೇಶನಗಳಲ್ಲಿ ಬಹುಮಹಡಿ ಕಟ್ಟಡಗಳನ್ನು ಕಟ್ಟಲು ಅನುವು ಮಾಡಿಕೊಡಲು ಹಾಗೂ ಸದರಿ ಕಟ್ಟಡಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅನುವು ಮಾಡಿಕೊಡುವ ಉದ್ದೇಶದಿಂದ ಜಿ.ಬಿ.ಡಿ.ಎ ವ್ಯಾಪ್ತಿಯಲ್ಲಿ ಟಿ.ಡಿ.ಆರ್ ಕೊರತೆ ಇರುವುದರಿಂದ Premium FAR ರಡಿಯಲ್ಲಿ ಗರಿಷ್ಠ 0.6ವರೆಗೆ ಹೆಚ್ಚುವರಿ FAR ಅನ್ನು ಅನುಮತಿಸಲು ಅವಕಾಶ ಕಲ್ಪಿಸಲು;

**<u>ಷರತ್ತುಗಳು:</u>**

HUDCO/ಬ್ಯಾಂಕ್ ಸಾಲಗಳನ್ನು ನಿರ್ವಹಿಸಲು escrow ಖಾತೆಯನ್ನು ತೆರೆಯತಕ್ಕದ್ದು ಹಾಗೂ ಯೋಜನೆಯ ಆದಾಯಗಳನ್ನು ಮೊದಲು HUDCO/ಬ್ಯಾಂಕ್ ಸಾಲಗಳನ್ನು ತೀರಿಸಲು ಬಳಸತಕ್ಕದ್ದು.

ಈ ಆದೇಶವನ್ನು ದಿನಾಂಕ:30/04/2026 ರಂದು ನಡೆದ ಸಚಿವ ಸಂಪುಟ ಸಭೆಯ ವಿಷಯ ಸಂಖ್ಯೆ: ಸಿ/227/2026 ರಲ್ಲಿ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,**

(ರಾಜೇಶ್ ಎಸ್.ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಬಿ.ಡಿ.ಎ & ಬೆಂ-1).

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH